ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಇ-ಆಡಳಿತ : ಶಿ.ಸೇ.ಮಾಹಿತಿ: 01/2020-21 ದಿನಾಂಕ: 25.09.2020

**ತುರ್ತು ಕ್ರಮಕ್ಕಾಗಿ**

## ಸುತ್ತೋಲೆ

**ವಿಷಯ:**-ಶಿಕ್ಷಕರ ಸೇವಾಮಾಹಿತಿಯನ್ನು ಪರಿಶೀಲಿಸಿ ಶಿಕ್ಷಕರ ಮಿತ್ರ (EEDS) ತಂತ್ರಾಂಶದಲ್ಲಿ ಇಂದೀಕರಿಸುವ ಬಗ್ಗೆ.

**ಉಲ್ಲೇಖ:** ದಿನಾಂಕ:-18/09/2020 ರಂದು ನಡೆದ ವಿಡಿಯೋ ಕಾನ್ಫರೆನ್ಸ್ ನ ಸೂಚನೆಗಳಂತೆ

---------

ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಮಾಹಿತಿಯನ್ನು 2017 ರಿಂದ ಶಿಕ್ಷಕರ ಸೇವಾ ಮಾಹಿತಿ ತಂತ್ರಾಂಶ(ಟಿ.ಡಿ.ಎಸ್.) ನಲ್ಲಿ ಅಳವಡಿಸಲಾಗಿತ್ತು. ಟಿ.ಡಿ.ಎಸ್ ನಲ್ಲಿ ಅಳವಡಿಸಲಾದ ಶಿಕ್ಷಕರ ಸಂಪೂರ್ಣ ಸೇವಾ ಮಾಹಿತಿಯನ್ನು ಶಿಕ್ಷಕರ ಮಿತ್ರ (EEDS) ತಂತ್ರಾಂಶಕ್ಕೆ ವರ್ಗಾಯಿಸಲಾಗಿದೆ. ಈ ಜ್ಞಾಪನದೊಂದಿಗೆ ಅಡಕಗೊಳಿಸಿದ ಕೈಪಿಡಿಯಂತೆ ಶಿಕ್ಷಕರ ಮಿತ್ರ (EEDS) ತಂತ್ರಾಂಶದಲ್ಲಿ ಎಲ್ಲಾ ಕಛೇರಿಯ ಡಿಡಿಓಗಳು ತಮ್ಮ ಡಿಡಿಓ ಲಾಗಿನ್ ಐಡಿ ಮತ್ತು ಪಾಸ್ ವರ್ಡ್ ಬಳಸಿ ಲಾಗಿನ್ ಆಗುವುದು. ಹೋಮ್ ಪೇಜ್ ನಲ್ಲಿ Edit Employee Details ಕ್ಲಿಕ್ ಮಾಡಿದಾಗ ತಮ್ಮ ಅಧೀನ ಶಾಲೆ/ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ವೃಂದ ಸಹಶಿಕ್ಷಕರು ಹಾಗೂ ಮುಖ್ಯಶಿಕ್ಷಕರ ಪಟ್ಟಿ ಲಭ್ಯವಾಗುವುದು. ಪ್ರತಿಯೊಂದು ಶಿಕ್ಷಕರ ಕೆ.ಜಿ.ಐ.ಡಿ. ಸಂಖ್ಯೆ ಕ್ಲಿಕ್ ಮಾಡಿ ಆಯಾ ಶಿಕ್ಷಕರ ಸೇವಾಮಾಹಿತಿಯನ್ನು ಈ ಕೆಳಕಂಡ ಸೂಚನೆಗಳಂತೆ ಪರಿಶೀಲಿಸಿ, ಅಗತ್ಯವಿದ್ದಲ್ಲಿ ಇಂದೀಕರಿಸಲು ತಿಳಿಸಿದೆ.

1. **Basic Details:**
   - ಶಿಕ್ಷಕರ ಹೆಸರು, ಕೆ.ಜಿ.ಐ.ಡಿ ಸಂಖ್ಯೆ, ಜನ್ಮ ದಿನಾಂಕ ವನ್ನು ಈಗಾಗಲೇ ಪರಿಶೀಲಿಸಿರುವುದರಿಂದ ಅವುಗಳನ್ನು ಮಾರ್ಪಡಿಸಲು ಅವಕಾಶ ನೀಡಿರುವುದಿಲ್ಲ.
   - ಅಳವಡಿಸಲಾಗಿರುವ ಎಲ್ಲಾ ಮಾಹಿತಿಯನ್ನು ಪರಿಶೀಲಿಸುವುದು. ಅಗತ್ಯವಿದ್ದಲ್ಲಿ ಶಿಕ್ಷಕರ ಮನವಿ ಮತ್ತು ದಾಖಲೆಗಳಂತೆ ವಿಳಾಸ, ವೈವಾಹಿಕ ಸ್ಥಿತಿ, ಪತಿ/ಪತ್ನಿಯ ವಿವರ, ಪತಿ/ಪತ್ನಿಯ ಉದ್ಯೋಗದ ಮಾಹಿತಿಯನ್ನು ಅಳವಡಿಸಿ ಸಬ್‌ಮಿಟ್ ಮಾಡುವುದು.
2. **Working Details:**
   - ಶಿಕ್ಷಕರ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆ/ಕಛೇರಿ, ತಾಲ್ಲೂಕು, ಜಿಲ್ಲೆ ವಿವರ, ಸೇವೆಗೆ ಸೇರಿದ ದಿನಾಂಕ, ಪ್ರಸ್ತುತ ವೃಂದಕ್ಕೆ ಬಂದ ದಿನಾಂಕ ಮತ್ತು ಪ್ರಸ್ತುತ ಶಾಲೆಗೆ ಬಂದ ದಿನಾಂಕ ಮಾಹಿತಿಯನ್ನು ಈಗಾಗಲೇ ಪರಿಶೀಲಿಸಿರುವುದರಿಂದ ಅವುಗಳನ್ನು ಮಾರ್ಪಡಿಸಲು ಅವಕಾಶ ನೀಡಿರುವುದಿಲ್ಲ.

- ಶಿಕ್ಷಕರ ಬಡ್ತಿ, ವರ್ಗಾವಣೆ ಮತ್ತಿತರೆ ಕಾರಣಗಳಿಂದ ಸ್ಥಳ ಬದಲಾವಣೆಯಾಗಿದ್ದಲ್ಲಿ ಅಥವಾ ಅದೇ ಡಿಡಿಓ ವ್ಯಾಪ್ತಿಯ ಇತರೆ ಶಾಲೆಗಳಿಗೆ ಸ್ಥಳನಿಯುಕ್ತಿ ಹೊಂದಿದ್ದರೂ ಸಹ Transfer Tab ನಲ್ಲಿ ಲಭ್ಯವಿರುವ Transfer Out/Transfer In ಮೂಲಕವೇ ಮಾಹಿತಿಯನ್ನು ಇಂದೀಕರಿಸುವುದು.
- ಶಿಕ್ಷಕರ ಪ್ರೊಬೇಷನ್ ಅವಧಿ ಘೋಷಣೆಯಾಗಿರುವ ಬಗ್ಗೆ ಮಾಹಿತಿಯನ್ನು ಕಡ್ಡಾಯವಾಗಿ ಇಂದೀಕರಿಸುವುದು. ಪ್ರೊಬೇಷನ್ ಅವಧಿ ಘೋಷಣೆ ಮಂಜೂರಾಗದ ಶಿಕ್ಷಕರಿಗೆ ವರ್ಗಾವಣೆ ನಿಯಂತ್ರಣ ಕಾಯ್ದೆ ಮತ್ತು ನಿಯಮಗಳನ್ವಯ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
- ಕಾಲಮಿತಿ ವೇತನ ಬಡ್ತಿ ಮಂಜೂರಾತಿ ವಿವರಗಳನ್ನು ಪರಿಶೀಲಿಸಿ, ಇಂದೀಕರಿಸಿ ಸಬ್‌ಮಿಟ್ ಮಾಡುವುದು.

3. **Priority/Exemption Details:**

- ಶಿಕ್ಷಕರು ವರ್ಗಾವಣೆಗೆ ಸಂಬಂಧಿಸಿದಂತೆ ತಮ್ಮ ಆದ್ಯತೆ ಮತ್ತು ವಿನಾಯ್ತಿ ಕೋರಿ ದಾಖಲೆಗಳ ಸಹಿತ ಮನವಿ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ, ಆದ್ಯತೆ/ವಿನಾಯ್ತಿ ಆಯ್ಕೆ ಮಾಡಬಹುದಾಗಿದೆ.
- ಒಂದಕ್ಕಿಂತ ಹೆಚ್ಚು ಆದ್ಯತೆ/ವಿನಾಯ್ತಿ ಪ್ರಕರಣಗಳ ಆಯ್ಕೆಗೆ ಅವಕಾಶ ನೀಡಿದೆ.
- ಶಿಕ್ಷಕರಿಂದ ಮನವಿ ಸ್ವೀಕೃತವಾಗದಿದ್ದಲ್ಲಿ, ಇಂದೀಕರಿಸುವ ಅವಶ್ಯಕತೆ ಇರುವುದಿಲ್ಲ. ಕೋರಿಕೆ ವರ್ಗಾವಣೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಶಿಕ್ಷಕರಿಗೆ ಆದ್ಯತೆಯನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಸಂಬಂಧಿತ ದಾಖಲೆಗಳನ್ನು ಅಪ್ ಲೋಡ್ ಮಾಡಲು ಅವಕಾಶ ನೀಡಲಾಗುವುದು.

4. **Qualification Details:**

- ಟಿ.ಡಿ.ಎಸ್.ನಲ್ಲಿ ಅಳವಡಿಸಲಾದ ವಿದ್ಯಾರ್ಹತೆ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದ್ದು, ಪರಿಶೀಲಿಸಿ ಅಗತ್ಯವಿದ್ದಲ್ಲಿ ಇಂದೀಕರಿಸುವುದು. ಹೆಚ್ಚುವರಿ ವಿದ್ಯಾರ್ಹತೆಯ ಮಾಹಿತಿಯಿದ್ದಲ್ಲಿ ಅಳವಡಿಸುವುದು.

5. **Department Exam Details:**

- ಟಿ.ಡಿ.ಎಸ್.ನಲ್ಲಿ ಅಳವಡಿಸಲಾದ ವಿದ್ಯಾರ್ಹತೆ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದ್ದು, ಪರಿಶೀಲಿಸಿ ಅಗತ್ಯವಿದ್ದಲ್ಲಿ ಇಂದೀಕರಿಸುವುದು. ಹೆಚ್ಚುವರಿ ವಿದ್ಯಾರ್ಹತೆಯ ಮಾಹಿತಿಯಿದ್ದಲ್ಲಿ ಅಳವಡಿಸುವುದು.

6. **Service Details :**

- ಈಗಾಗಲೇ ಅಳವಡಿಸಲಾಗಿರುವ ಸೇವಾ ಮಾಹಿತಿಯನ್ನು ಲಭ್ಯಗೊಳಿಸಲಾಗಿದೆ. ಮಾಹಿತಿಯನ್ನು ಮತ್ತೊಮ್ಮೆ ಸೇವಾವಹಿಯಂತೆ ಪರಿಶೀಲಿಸುವುದು ಹಾಗೂ ಅಗತ್ಯವಿದ್ದಲ್ಲಿ ಇಂದೀಕರಿಸುವುದು.
- ಈಗಾಗಲೇ ಅಳವಡಿಸಲಾಗಿರುವ ಶಾಲೆ/ಕಛೇರಿಗಳ ವಲಯವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 ರ ನಿಯಮ 2(ಇ) ನಂತೆ ಪರಿಶೀಲಿಸಿ ಇಂದೀಕರಿಸುವುದು.
- ಶಿಕ್ಷಕರ ಶಾಲಾವಾರು, ವಲಯಾವಾರು ಸೇವಾ ಅವಧಿ ಅಧಾರದ ಮೇಲೆ ಅವರ ಸೇವಾ ಅಂಕಗಳು (Weighted Score), ವರ್ಗಾವಣೆಗೆ ಅರ್ಹತಾ ಅವಧಿ ನಿರ್ಧರಿತವಾಗುವುದರಿಂದ ಈ ಅಂಶಗಳನ್ನು ಅತ್ಯಂತ ಜಾಗರೂಕತೆಯಿಂದ ನಿಯಮಾನುಸಾರ ಪರಿಶೀಲಿಸಿ ಇಂದೀಕರಿಸಲು ಕ್ರಮ ವಹಿಸುವುದು.

7. **Transfer:**

- ವರ್ಗಾವಣೆ/ಬಡ್ತಿ ಮೂಲಕ ಬೇರೆ ಶಾಲೆ/ಕಛೇರಿಗಳಿಗೆ ಸ್ಥಳನಿಯುಕ್ತಿ ಹೊಂದಿದ ಶಿಕ್ಷಕರ ಮಾಹಿತಿಯನ್ನು ಮೂಲ ಶಾಲೆಯ ಡಿಡಿಓ ಗಳು ತಮ್ಮ ಲಾಗಿನ್‌ನಲ್ಲಿ **Transfer Out** ಮೂಲಕ ಬಿಡುಗಡೆ ದಿನಾಂಕ ಮತ್ತು ಸ್ಥಳನಿಯುಕ್ತಿ ಹೊಂದಿದ ಶಾಲೆ/ಹುದ್ದೆಯ ಮಾಹಿತಿಯನ್ನು ಅಳವಡಿಸುವುದು.
- ವರ್ಗಾವಣೆ/ಬಡ್ತಿ ಮೂಲಕ ಬೇರೆ ಶಾಲೆ/ಕಛೇರಿಗಳಿಗೆ ಸ್ಥಳನಿಯುಕ್ತಿ ಹೊಂದಿದ ಶಿಕ್ಷಕರ ಮಾಹಿತಿಯನ್ನು ಸ್ಥಳನಿಯುಕ್ತಿ ಹೊಂದಿದ ಶಾಲೆಯ ಡಿಡಿಓ ತಮ್ಮ ಲಾಗಿನ್‌ನಲ್ಲಿ **Transfer In** ಮೂಲಕ ಕರ್ತವ್ಯಕ್ಕೆ ಹಾಜರಾದ ದಿನಾಂಕ ಮತ್ತು ಹುದ್ದೆಯ ಮಾಹಿತಿಯನ್ನು ಅಳವಡಿಸುವುದು.

ಮಾಹಿತಿ ಇಂದೀಕರಣ ಕಾರ್ಯವನ್ನು ಡಿಡಿಓ ಲಾಗಿನ್‌ನಲ್ಲಿ ಮಾತ್ರ ನೀಡಲಾಗಿರುವುದರಿಂದ ಯಾವುದೇ ಶಿಕ್ಷಕರ ಸೇವಾ ಮಾಹಿತಿಯಲ್ಲಿ ತಪ್ಪುಗಳಾಗಿರುವ ಬಗ್ಗೆ ಅಥವಾ ಆ ಕಾರಣದಿಂದ ವರ್ಗಾವಣೆ ಅಥವಾ ಇತರೆ ಸೇವಾ ಸೌಲಭ್ಯಗಳಿಂದ ವಂಚಿತರಾಗಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾದಲ್ಲಿ ಸಂಬಂಧಿಸಿದ ಡಿಡಿಓ ರವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ಮೇಲ್ಕಂಡ ಎಲ್ಲಾ ಅಂಶಗಳಂತೆ ಕೈಪಿಡಿಯನ್ನು ಅನುಸರಿಸಿ ಎಲ್ಲಾ ಶಿಕ್ಷಕರ ಮಾಹಿತಿಯನ್ನು ದಿನಾಂಕ:-02-10-2020ರೊಳಗೆ ಪರಿಶೀಲಿಸಿ ಇಂದೀಕರಿಸಲು ಸೂಚಿಸಿದೆ.

ಸಂಬಂಧಿಸಿದಂತೆ ಯಾವುದೇ ಗೊಂದಲಗಳಿದ್ದಲ್ಲಿ ವಿವರವನ್ನು karonlineserviceshelp@gmail.com ಗೆ ಈ-ಮೇಲ್ ಮೂಲಕ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಈ ಮೂಲಕ ತಿಳಿಸಿದೆ.

ನಿರ್ದೇಶಕರು
ಉರ್ದು ಹಾಗೂ ಇತರೆ ಭಾಷಾ ಅಲ್ಪಸಂಖ್ಯಾತ
ನಿರ್ದೇಶನಾಲಯ ಹಾಗೂ ವರ್ಗಾವಣಾ ಕೋಶ

ಪ್ರತಿಯನ್ನು

1. **ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.**
2. **ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.**

**ಇವರಿಗೆ,**

1. ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು( ಪ್ರಾಥಮಿಕ ಶಿಕ್ಷಣ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರು(ಪ್ರೌಢ ಶಿಕ್ಷಣ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ನಿರ್ದೇಶಕರು, ಕ.ಪ್ರೌ..ಶಿ.ಪ.ಮಂಡಳಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7. ನಿರ್ದೇಶಕರು, ಇತರೆ ಪರೀಕ್ಷೆಗಳು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
8. ನಿರ್ದೇಶಕರು, ಕ.ಪ.ಪು.ಸಂಘ (ರಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
9. ನಿರ್ದೇಶಕರು, ಸಿಸ್ಲೆಪ್, ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
10. ವಿಭಾಗೀಯ ಜಂಟಿನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ, ಕಲ್ಬುರ್ಗಿ ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
11. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ ( ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ)
15. ಹಿರಿಯ ಸಹಾಯಕ ನಿರ್ದೇಶಕರು(ಆನ್ ಲೈನ್ ಸೇವೆಗಳು), ಆಯುಕ್ತರ ಕಛೇರಿ, ಬೆಂಗಳೂರು., ಇವರಿಗೆ ಸೂಕ್ತ ಕ್ರಮಕ್ಕಾಗಿ
16. ಕಛೇರಿ ಪ್ರತಿ.